ಗಮನ ಸೆಳೆಯಂಥ ಸೂಚನೆಗಳು

(೧) ತುಂಗಭದ್ರ ಮೇಲ್ಮಟ್ಟದ ಬಲದಂಡೆ ಕಾಲುವೆ ಒಡೆದ ಪರಿಣಾಮವಾಗಿ ರೈತರಿಗೆ ತೊಂದರೆಯಾಗಿರುವುದು

ಶ್ರೀ ಕೆ.ಬಿ. ಶಾಣಪ್ಪ.—ಅಧ್ಯಕ್ಷರೆ, ಇತ್ತೀಚೆಗೆ ತುಂಗಭದ್ರಾ ಮೇಲ್ಮಟ್ಟದ ಬಲದಂಡೆ ಕಾಲುವೆ ಭಾರಿ ಪ್ರಮಾಣದಲ್ಲಿ ಒಡೆದಿದ್ದು ಇದರಿಂದ ಸಾವಿರಾರು ರೈತರಿಗೆ ಉಂಟಾಗಿರುವ ತೊಂದರೆ ಬಗ್ಗೆ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ನೀರಾವರಿ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—ಘನ ಅಧ್ಯಕ್ಷರೆ, ಗಮನ ಸೆಳೆಯುವ ಸೂಚನೆಗೆ ತಮ್ಮ ಅನುಮತಿಯಿಂದ ಉತ್ತರ ಕೊಡಬಯಸುತ್ತೇನೆ.

ತುಂಗಭದ್ರಾ ಮೇಲ್ಮಟ್ಟದ ಬಲದಂಡೆ ಕಾಲುವೆಯು ತುಂಗಭದ್ರಾ ಮಂಡಳಿಯ ಅಧೀನದಲ್ಲಿದ್ದು ಈ ನಾಲೆಯಿಂದ ದಿನಾಂಕ ೧೬–೭–೧೯೮೬ ರಂದು ಪ್ರಸಕ್ತ ಸಾಲಿನಲ್ಲಿ ನೀರಾವರಿ ಬೆಳೆ ಸಲುವಾಗಿ ನೀರನ್ನು ಬಿಡುಗಡೆ ಮಾಡಲಾಗಿದ್ದು ದಿನಾಂಕ ೨೯–೭–೧೯೮೬ರ ಸಮಯಕ್ಕೆ ೩೪೦೦ ಕ್ಯೂಸೆಕ್ಸ್ ನೀರನ್ನು ಬಿಡುಗಡೆ ಮಾಡಲಾಗಿತ್ತು. ನಾಲೆಯ ಒಡ್ಡು ಭಾಗಗಳಲ್ಲಿ ಪುತ್ತಿತರ ಮಂಖ್ಯ ಭಾಗಗಳಲ್ಲಿ ''ಸೀಪೇಜ್'' ಅಥವಾ ''ಪೈಪಿಂಗ್'' ಆಗುವ ಸಂಭವವಿದ್ದಲ್ಲಿ ಇಂತಹ ಭಾಗಗಳ ನಿರೀಕ್ಷಣೆ ನಡೆಸಿ ಹೆಚ್ಚಿಗೆ ಗಮನವಹಿಸಬೇಕೆಂದು ತುಂಗಭದ್ರಾ ಮಂಡಳಿಯ ಅಧಿಕಾರಿ ವರ್ಗದವರಿಗೂ ಸೂಚನೆ ನೀಡಲಾಗಿದೆಯೆಂದು ಪರದಿಯಾಗಿದೆ.

ಆದರೆ, ದಿನಾಂಕ ೩೦–೭–೧೯೮೬ರ ಬೆಳಿಗಿನ ಜಾವ ಸುಮಾರು ೪ ಗಂಟೆಯ ವೇಳೆಗೆ ತೋರಣಗಲ್ಲು ಬಳಿ ನಾಲೆಯ ೫೧ನೇ ಕಿ.ಮೀ.ನಲ್ಲಿ ''ಪೈಪಿಂಗ್'' ಆಗಿದೆಯೆಂದು ಗಮನಿಸಿ, ಇದನ್ನು ತಡೆಗಟ್ಟಲು ಸಂಬಂಧಪಟ್ಟ ಅಧಿಕಾರಿ ವರ್ಗದವರು ಸ್ಥಳಕ್ಕೆ ಧಾವಿಸಿ ತಕ್ಷಣ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ. ಆದಾಗ್ಯೂ ಸಹ, ಈ ಪೈಪಿಂಗ್ ಜಾಗದಲ್ಲೇ, ಸುಮಾರು ೨೫೦ ಮೀ. ಉದ್ದದ ನಾಲಾ ಒಡ್ಡು ಒಡೆದು ಹೋಗಿತೆಂದು ವರದಿಯಾಗಿದೆ. ನಾಲೆಯಲ್ಲಿ ೩೪೦೦ ಕ್ಯೂಸೆಕ್ಸ್ ನೀರು ಹರಿಯುತ್ತಿದ್ದ ಕಾರಣ ಒಡೆದು ಹೋದ ಒಡ್ಡಿನ ಜಾಗದಲ್ಲಿ ನೀರು ದರೋಜಿ ಕೆರೆಯ ಅಂಗಳಕ್ಕೆ ಧಾವಿಸಿತು. ನಾಲೆಯು ಒಡಕಿನ ಬಗ್ಗೆ ಮತ್ತು ಅದರಿಂದ ಉಂಟಾಗಿರುವ ಸ್ಥಳೀಯ ಪ್ರಮಾಹದ ಬಗ್ಗೆ ಜಿಲ್ಲಾಧಿಕಾರಿಗಳಿಗೂ ಮತ್ತು ರೈಲ್ವೆ ಅಧಿಕಾರಿಗಳಿಗೂ ತಕ್ಷಣವೇ ಜಾಗ್ರತಾ ಕ್ರಮವನ್ನು ತೆಗೆದುಕೊಳ್ಳಲು ಅಧಿಕಾರಿಗಳು ಸುದ್ದಿಯನ್ನು ಕಳುಹಿಸಿರುತ್ತಾರೆ.

ನಾಲೆಯು ೩೩ನೇ ಕಿ.ಮೀ.ನಲ್ಲಿರುವ ಎಸ್ಕೇಪ್ ಮೂಲಕ ನಾಲೆಯ ನೀರನ್ನು ಬೇರೆಡೆಗೆ ಹರಿಸಿ ನಾಲೆಯ ನೀರಿನ ಪ್ರಮಾಣವನ್ನು ಕಡಿಮೆ ಮಾಡಿ ಒಡ್ಡಿನ ದುರಸ್ತಿ ಕಾರ್ಯವನ್ನು ದಿನಾಂಕ ೧–೮–೮೬ ರಿಂದ ಪ್ರಾರಂಭ ಮಾಡಲಾಯಿತು. ರೈಲ್ವೆ ಸೇತುವೆಗಾಗಲಿ ಅಥವಾ ನಾಲೆಯ ಅಂಡರ್ ಟನಲ್ ಗಾಗಲಿ ಯಾವ ತರಹದ ಹಾನಿಯುಂಟಾಗಿರುವುದಿಲ್ಲವೆಂದು ಪರದಿಯಾಗಿದೆ. ಒಡೆದು ಹೋದ ನಾಲೆಯ ಒಡ್ಡಿನ ದುರಸ್ತಿ ಕೆಲಸಗಳನ್ನು ದಿನವೂ ೨೪ ಗಂಟೆ ಕಾಲ ಸತತವಾಗಿ ಕೆಲಸ ಮಾಡಲಾಗಿದ್ದು ದಿನಾಂಕ ೭–೮–೧೯೮೬ರಂದು ನಾಲೆಯಲ್ಲಿ ೩೦೦ ಕ್ಯೂಸೆಕ್ಸ್ ನೀರನ್ನು ಬಿಡಲಾಗುವುದೆಂದು, ನಂತರ ದಿನಾಂಕ ೧೩–೮–೧೯೮೬ರಿಂದ ೩೦೦೦ ಕ್ಯೂಸೆಕ್ಸ್ ನೀರನ್ನು ನಾಲೆಯಲ್ಲಿ ಹರಿಸಲಾಗಿದೆಯೆಂದು ವರದಿಯಾಗಿದೆ. ದುರಸ್ತಿ ಕಾರ್ಯಗಳನ್ನು ಪೂರ್ಣಗೊಳಿಸಲಾಗಿದೆಯೆಂದು ವರದಿಯಾಗಿದ್ದು ಆಗಸ್ಟ್ ಮಾಹೆಯಲ್ಲಿ ಬಿಡಬೇಕಾದ ಗರಿಷ್ಠ ಪ್ರಮಾಣ ೩೪೦೦ ಕ್ಯೂಸೆಕ್ಸ್ ನೀರನ್ನು ನಾಲೆಯಲ್ಲಿ ಬಿಡಲು ಸಾಧ್ಯವಿದೆಯೆಂದು ವರದಿಯಾಗಿದೆ.

ನಾಲೆಯಲ್ಲಿ ಜುಲೈ ೧೬ರಂದು ನೀರಾವರಿ ಸಲುವಾಗಿ ನೀರನ್ನು ಬಿಡುಗಡೆ ಮಾಡಿದ ಕಾರಣ ಕೇವಲ ೧೫ ದಿವಸಗಳ ನಂತರ ನಾಲೆಯು ಒಡೆದು ಹೋಗಿರುವುದರಿಂದ ಅಚ್ಚುಕಟ್ಟು ಪ್ರದೇಶದಲ್ಲಿ ಬಿತ್ತನೆ ಹಂತದ ಕೆಲಸಗಳು ಮಾತ್ರ ಪ್ರಗತಿಯಲ್ಲಿದ್ದು ಯಾವ ಬೆಳೆಗೂ ಹಾನಿಯ ಪ್ರಶ್ನೆ ಉದ್ಭವಿಸುವುದಿಲ್ಲ. ನೀರಾವರಿ ಬೆಳೆ ಸಲುವಾಗಿ ಪ್ರಾಯಶಃ ಅವಧಿಯನ್ನು ಮುಂದೂಡಬೇಕಾಗುವ ಸಂಭವ ಬರಬಹುದು. ಈ ವಿಷಯವನ್ನು ಗಮನದಲ್ಲಿಟ್ಟು ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು.

ಶ್ರೀ ಪಂಪಾಪತಿ.—ತುಂಗಭದ್ರಾ ನಾಲೆ ಒಡೆದು ಹೋಗಿ ಸಾವಿರಾರು ಜನರಿಗೆ ತೊಂದರೆಯಾಗಿದೆ ಮತ್ತು ಅನೇಕರ ಜಮೀನಿನಲ್ಲಿರತಕ್ಕ ಫಸಲು ಹಾಳಾಗಿದೆ. ಇದು ಮೊದಲನೆಯ ಸಾರಿ ಅಲ್ಲ,

ಸುಪಾರು ನಾಲ್ಕೈದು ಸಾರಿ ಈ ನಾಲೆ ಒಡೆದು ಹೋಗಿದೆ ಎನ್ನುವುದು ಪತ್ರಿಕೆಯಲ್ಲಿ ಬಂದಿದೆ. ಆಂಧ್ರ ಮಂತ್ರಿಗಳು ಇದರ ಬಗ್ಗೆ ಹೇಳಿದ್ದಾರೆ. ಕರ್ನಾಟಕದ ಭಾಗದಲ್ಲಿ ನಾಲೆ ಆಗಿಂದಾಗ್ಗೆ ಒಡೆಯಲಿಕ್ಕೆ ಕಾರಣ ಏನು? ಇನ್ನು ಮುಂದೆ ಇದು ಒಡೆಯದಂತೆ ಮಾನ್ಯ ಮಂತ್ರಿಗಳು ಕ್ರಮ ತೆಗೆದುಕೊಳ್ಳುತ್ತೀರಾ? ಈಗ ಇದರಿಂದ ಯಾರಿಗೆ ತೊಂದರೆಯಾಗಿದೆ, ಅವರಿಗೆ ಏನು ಪರಿಹಾರ ಒದಗಿಸುತ್ತೀರಿ? ಒದಗಿಸದೇ ಇದ್ದರೆ ಒದಗಿಸುತ್ತೀರಾ ಎನ್ನುವುದನ್ನು ತಿಳಿಸಬೇಕು.

ಶ್ರೀ ಹೆಚ್.ಡಿ. ದೇವೇಗೌಡ.—ಸನ್ಮಾನ್ಯ ಸದಸ್ಯರು ಕೇಳಿದಂಥ ಪ್ರಶ್ನೆಗೆ ಉತ್ತರ ಇಷ್ಟೆ. ಸನ್ಮಾನ್ಯ ಸದಸ್ಯರಿಗೆ ತುಂಗಭದ್ರಾ ನಾಲೆಯ ಬಗ್ಗೆ ಪೂರ್ಣ ಮಾಹಿತಿಯನ್ನು ಒದಗಿಸುವುದು ಆಗತ್ಯ ಎಂದು ನಾನು ಭಾವಿಸಿಕೊಳ್ಳುತ್ತೇನೆ. ಅಲ್ಲಿರತಕ್ಕ ಮೂರು ನಾಲೆಗಳಲ್ಲಿ ಒಂದು ಎಡದಂಡೆ ನಾಲೆ ಇದೆ. ಎರಡು ಬಲದಂಡೆ ಕೆಳಭಾಗದ ನಾಲೆ ಇದೆ. ಒಟ್ಟು ಮೂರು ನಾಲೆಗಳು ಇವೆ. ನಾಲೆಗಳನ್ನು ಕಟ್ಟಿಸಿದವರು ಆಂಧ್ರ ಸರ್ಕಾರದವರು ನಂತರ ಅವರು ನಮಗೆ ವಹಿಸಿ ಕೊಟ್ಟರು. ಒಡೆದು ಹೋಗು ವಂಥ ನಾಲೆಯನ್ನು ಅವರು ಕಟ್ಟಿಸಿದ್ದರೆ ಅದಕ್ಕೆ ನಾನು ಹೊಣೆಯಾಗಲಿಕ್ಕೆ ಸಾಧ್ಯವಿಲ್ಲ. ಈಗ ಒಡೆದಿರುವ ಪ್ರದೇಶ ಏನಿದೆ ಅದು ತುಂಗಭದ್ರಾ ಮಂಡಲಿ ವ್ಯಾಪ್ತಿಯಲ್ಲಿ ಬರುತ್ತದೆ. ಇವತ್ತು ಮಂಡಳಿಯವರು ಹೊಡೆದು ಹೋದಂಥ ಪ್ರದೇಶದಲ್ಲಿ ಅತ್ಯಂತ ಜರೂರು ವೇಗದಿಂದ ಕೆಲಸ ಮಾಡಿ, ಯಾವುದೇ ರೀತಿಯ ಅಪಾಯವಾಗದಂತೆ ೧೪ ದಿವಸದಲ್ಲಿ ಕೆಲಸ ಮುಗಿಸಿಕೊಟ್ಟಿದ್ದಾರೆ. ಈಗ ನೀರು ಸರಾಗವಾಗಿ ಹರಿಯುತ್ತಿದೆ.

ಶ್ರೀ ಪಂಪಾಪತಿ.—ನಷ್ಟಕ್ಕೆ ಒಳಗಾದ ಜನರಿಗೆ ಬೇಗ ಪರಿಹಾರ ಒದಗಿಸಿಕೊಡದೇ ಹೋದರೆ ಆ ಜನರು ಬಹಳ ತೊಂದರೆಗೆ ಗುರಿಯಾಗಬೇಕಾಗುತ್ತದೆ. ಬಡವರ ಗುಡಿಸಲುಗಳು ನೀರಿನಲ್ಲಿ ಕೊಚ್ಚಿಹೋಗಿವೆ.

ಶ್ರೀ ಹೆಚ್. ಡಿ. ದೇವೇಗೌಡ.—ಕಾಲುವೆ ಹೊಡೆದು ಹೋದಂಥ ಸಂದರ್ಭದಲ್ಲಿ ನೀರು ಬೆಳೆಗಳ ಮೇಲೆ ಹರಿದು ಭೂಮಿಗೆ ಹಾನಿಯಾಗಿದ್ದರೆ, ಜಿಲ್ಲಾಧಿಕಾರಿಗಳಿಂದ ಮಾಹಿತಿ ತರಿಸಿಕೊಂಡು ಹೆಚ್ಚು ನಷ್ಟ ಸಂಭವಿಸಿದವರಿಗೆ ಸರ್ಕಾರ ಪರಿಹಾರ ಕೊಡಲಿಕ್ಕೆ ಪ್ರಯತ್ನ ಮಾಡುತ್ತದೆ.

ಶ್ರೀ ಎಂ.ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೇ, ೧೬–೭–೮೬ರಂದು ನೀರನ್ನು ಬಿಡುಗಡೆ ಮಾಡಲಾಗಿದೆ. ೨೭–೭–೮೬ರಂದು ನಾಲೆಯಲ್ಲಿ ೩೪೦೦ ಕ್ಯೂಸೆಕ್ಸ್ ನೀರು ಇದೆ. ೩೦ನೇ ತಾರೀಖು ಈ ಘಟನೆ ನಡೆದಿದೆ. ೨೯–೩೧ನೇ ತಾರೀಖು ಸೀಪೇಜ್ ಜಾಸ್ತಿಯಾಗಿ ಹಾನಿಯಾಗಿದೆ. ಮಾನ್ಯ ಮಂತ್ರಿಯವರು ಹಾನಿಯಾಗಿಲ್ಲವೆಂದು ತಮ್ಮ ಉತ್ತರದ ಕೊನೆಯಲ್ಲಿ ಹೇಳಿದ್ದಾರೆ. ಸೀಪೇಜ್ ಆಗಿದ್ದಾಗ್ಗೆ ಆಗುತ್ತಿರುತ್ತದೆಂದು ಹೇಳಿದ್ದಾರೆ. ಸುಲಭವಾಗಿ ಆಂಧ್ರದವರ ಮೇಲೆ ಇದನ್ನು ಹಾಕಿ ದ್ದಾರೆ. ಭಾಷಾವಾರು ವಿಭಜನೆಯಾದ ಸಂದರ್ಭದಲ್ಲಿ ನಮಗೆ ಇದನ್ನು ಕೊಟ್ಟದ್ದು ಎಂದು ಹೇಳಿ ದ್ದಾರೆ. ಇದು ನಮ್ಮ ಜವಾಬ್ದಾರಿಗೆ ಬಂದ ಮೇಲೆ ಸೀಪೇಜ್ ಆಗದ ಹಾಗೆ ಏನು ಕ್ರಮ ತೆಗೆದು ಕೊಂಡಿದ್ದೀರಿ ?

ಶ್ರೀ ಹೆಚ್.ಡಿ. ದೇವೇಗೌಡ.—ಸಾಮಾನ್ಯವಾಗಿ ಎಡದಂಡೆ ನಾಲೆಯಲ್ಲಿ ಆಗಿಂದಾಗ್ಗೆ ಬಿರುಕು ಕಾಣಿಸಿಕೊಂಡು ಸೀಪೇಜ್ ವಾಟರ್ ಬರುತ್ತಿತ್ತು. ಈಗ ಆಗಿರುವುದು ಬಲದಂಡೆ ನಾಲೆಯಲ್ಲಿ, ಬಲ ದಂಡೆ ನಾಲೆಯಲ್ಲಿ ಸೀಪೇಜ್ ಕಾಣಿಸುವುದು ಬಹಳ ವಿರಳ. ಆದಕ್ಕೋಸ್ಕರ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಹಿಂದಿನ ಸರ್ಕಾರದಲ್ಲಿ ತಾಂತ್ರಿಕ ಸಮಿತಿಯವರು ಕೊಟ್ಟಿಂತ ವರದಿ ಏನಿತ್ತು ಅದನ್ನು ಮಾನ್ಯತೆ ಮಾಡಿ, ಇನ್ನರ್ ಲೈನಿಂಗ್ ಸರ್ಕಾರಗಾಗಿ ೧೪ ಕೋಟಿ ರೂಪಾಯಿಗಳನ್ನು ಕೊಡಬೇಕೆಂದು ನಿರ್ಣಯ ಮಾಡಿ, ಈಗ ೮ ಕೋಟಿ ಖರ್ಚು ಮಾಡಿದ್ದೇವೆ. ಇನ್ನರ್ ಲೈನಿಂಗ್ ವರ್ಕ್ ಆಗಿರುವ ಕಡೆ, ಸೀಪೇಜಾಗಲೀ, ಮತ್ತೊಂದಾಗಲೀ ಉದ್ಭವವಾಗಿಲ್ಲ. ಬೆಳೆಗಳನ್ನು ಇಡು ವುದಕ್ಕೆ ರೈತರಿಗೆ ಹಾನಿಯಾಗಿಲ್ಲ ನೀರು ಬಿಡುವಂಥಾದ್ದನ್ನು ವಿವರವಾಗಿ ಹೇಳಿದೆ. ಅದಕ್ಕೆ ಸಂಬಂಧಪಟ್ಟಂಥ ಸಂದರ್ಭ ಬಂದರೆ ಮುಂದೂಡಬೇಕಾಗುತ್ತದೆಂದು ಹೇಳಿದ್ದೇನೆ. ಸುದೈವದಿಂದ ಮಳೆ ಚೆನ್ನಾಗಿ ಆಗಿ ಜಲಾಶಯದಲ್ಲಿ ನೀರು ಇದೆ. ಭೂಮಿ ಹಾಳಾಗಿದ್ದರೆ ಜಿಲ್ಲಾಧಿಕಾರಿಗಳಿಂದ ವರದಿ ತರಿಸಿಕೊಂಡು ಪರಿಹಾರ ಕೊಡು ವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ರೇವಣ್ಣ ಸಿದ್ದಯ್ಯ.—ಸ್ವಾಮಿ, ತುಂಗಭದ್ರಾ ನಾಲಾ ರಿಪೇರಿ ಕೆಲಸ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ ತುಂಗಭದ್ರಾ ಮಂಡಲಿಯ ವ್ಯಾಪ್ತಿಗೆ ಬರುತ್ತದೆ. ಮಾನ್ಯ ಮಂತ್ರಿಯವರು ಅಲ್ಪ ಸ್ವಲ್ಪ ರೈತರಿಗೆ ತೊಂದರೆಯಾಗಿದೆಯೆಂದು ಹೇಳಿದರು, ಅದನ್ನು ನಾನು ಒಪ್ಪುವುದಿಲ್ಲ. ಅನೇಕ ಜನರಿಗೆ ಮುಚ್ಚಿಕೊಂಡು ಹೋಗಿವೆ ದೊಡ್ಡ ದೊಡ್ಡ ಪಡ್ಡುಗಳು ಕೊಚ್ಚಿಕೊಂಡು ಹೋಗಿವೆ. ಬ

ಜೂನ್ ತಿಂಗಳ ಮೊದಲನೆಯ ವಾರದಲ್ಲಿ ಬಿತ್ತನೆ ಮಾಡಿದಂಥ ಒಂದೂವರೆ ತಿಂಗಳ ಬೆಳೆ ಕೊಚ್ಚಿ ಕೊಂಡು ಹೋಗಿದೆ. ರೈತ ಸಮುದಾಯಕ್ಕೆ ಅಪಾರ ನಷ್ಟ ಉಂಟಾಗಿದೆ. ೩೫೦೦ ಕ್ಯೂಸೆಕ್ಸ್ ನೀರು ೧೦ ಗಂಟೆಗಳ ಕಾಲ ಹರಿದಿದೆಯೆಂದರೆ ನಷ್ಟ ಯಾವ ಪ್ರಮಾಣದಲ್ಲಿ ಆಗಿರುತ್ತದೆಂಬುದನ್ನು ಊಹಿಸಿ ಕೊಳ್ಳಬಹುದು. ಆಗಿರತಕ್ಕ ನಷ್ಟವನ್ನು ಕರ್ನಾಟಕ ಸರ್ಕಾರ ಮತ್ತು ಆಂಧ್ರ ಸರ್ಕಾರ ಕೂಡಿಯೇ ಕೊಡಬೇಕಾಗುತ್ತದೆ. ಮಾನ್ಯ ಮಂತ್ರಿಯವರು ಒಮ್ಮೆ ಹೋಗಿ ನೋಡಿಕೊಂಡು ಬಂದು ತಕ್ಕ ಪರಿಹಾರ ಕೊಡತಕ್ಕ ವ್ಯವಸ್ಥೆ ಮಾಡಬೇಕೆಂದು ಹೇಳುತ್ತೇನೆ.

ಶ್ರೀ ಹೆಚ್.ಡಿ. ದೇವೇಗೌಡ:—ಮಾನ್ಯ ಸದಸ್ಯರು ಹೇಳಿರತಕ್ಕಂಥಾದ್ದು ನಿಜ. ನಾಲೆಗಳ ಕೆಲಸ ಬೋರ್ಡ್ ವ್ಯಾಪ್ತಿಗೆ ಬರುತ್ತದೆ. ಹೊಡೆದು ಹೋದರೆ ರಿಪೇರಿ ಮಾಡುವವರೇ ಅವರೆ ಕೆಲವು ಕಡೆ ಬೆಳೆ ಇಟ್ಟಿಲ್ಲವೆಂದು ಹೇಳಿದ್ದೇನೆ. ಬೆಳೆ ಇಟ್ಟು ನಷ್ಟವಾಗಿದ್ದರೆ, ಬಾವಿಗಳು ಮುಚ್ಚಿ ಕೊಂಡು ಹೋಗಿದ್ದರೆ, ಅನಾಹುತದ ಬಗ್ಗೆ ಸುದೀರ್ಘ ವರದಿಯನ್ನು ತರಿಸಿಕೊಂಡು ಪರಿಹಾರ ಕೊಡಿಸುವುದಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡುತ್ತೇನೆ. ಬೋರ್ಡಿನವರೇ ಎಲ್ಲಾ ರೀತಿಯ ಪರಿಹಾರ ವನ್ನು ಕೊಡಬೇಕಾಗುತ್ತದೆ. ಆ ದಿಸೆಯಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

(II) ಕಾವೇರಿ ಜಲ ವಿವಾದಕ್ಕೆ ಸಂಬಂಧಿಸಿದ ಸೂಚನೆ

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೆ, ಸಂಖ್ಯೆ ೧೮೮ ಸೂಚನೆ ಮೇರೆಗೆ ಕಾವೇರಿ ಜಲ ವಿವಾದಕ್ಕೆ ಸಂಬಂಧಪಟ್ಟಂತೆ ಮಾನ್ಯ ಲೋಕೋಪಯೋಗಿ ಮಂತ್ರಿಯವರ ಗಮನ ಸೆಳೆಯುತ್ತೇನೆ

ಶ್ರೀ ಹೆಚ್.ಡಿ. ದೇವೇಗೌಡ (ಲೋಕೋಪಯೋಗಿ ಕಾಡಾ ಮತ್ತು ನೀರಾವರಿ ಮಂತ್ರಿಗಳು).—ಕಾವೇರಿ ಜಲ ವಿವಾದವನ್ನು ಪರಸ್ಪರ ಸಂಧಾನದ ಮೂಲಕ ಪರಿಹರಿಸಿಕೊಳ್ಳಬಹುದೆಂಬುದೇ ಕರ್ನಾಟಕದ ನಿಲುವು. ಆದರಂತೆ ಈ ವಿವಾದವನ್ನು ಪರಿಹರಿಸಿಕೊಳ್ಳಲು ೧೯೮೧ರಲ್ಲಿಯೇ ಕರ್ನಾಟಕವು ತನ್ನ ೧೦ ಅಂಶಗಳ ಕಾರ್ಯಕ್ರಮವನ್ನು ಕೇಂದ್ರಕ್ಕೆ ಕಳುಹಿಸಿದೆ. ಈ ದಿಸೆಯಲ್ಲಿಯೇ ತನ್ನ ನಿಲುವನ್ನು ಪ್ರತಿಪಾದಿಸಿಕೊಂಡು ಬಂದಿದೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕಾವೇರಿ ಕೊಳ್ಳದ ಮುಖ್ಯ ಮಂತ್ರಿಗಳ ಸಭೆಯಲ್ಲಿ ತಮಿಳು ನಾಡು ಈ ವಿವಾದವನ್ನು ಪಂಚಾಯ್ತಿಗೆ ಒಪ್ಪಿಸಬೇಕೆಂದು ಒತ್ತಾಯಿಸಿತು. ಕರ್ನಾಟಕವು ಪಂಚಾಯ್ತಿಗೆ ಒಪ್ಪಿಸುವುದು ಬೇಡವೆಂತಲೂ ವಾದಿಸಿತು. ಒಪ್ಪಿಸಲೇಬೇಕೆಂದರೆ ಅಂತರ ರಾಜ್ಯ ನದಿಗಳ ನೀರಿನ ಹಂಚಿಕೆಯ ವಿಷಯದಲ್ಲಿ ಮಾರ್ಗಸೂಚಿ ನೀಡುವ ರಾಷ್ಟ್ರೀಯ ಜಲ ನೀತಿ ನಿರೂಪಣೆ ಆಗಿ ಅದಕ್ಕೆ ಲೋಕಸಭೆಯ ಒಪ್ಪಿಗೆಯಾದ ನಂತರ, ಕ್ರಮ ತೆಗೆದುಕೊಳ್ಳಬಹುದೆಂದು ತಿಳಿಸಲಾಯಿತು. ಕೇಂದ್ರ ಜಲ ಸಂಪನ್ಮೂಲ ಸಚಿವರು ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುವುದಾಗಿ ತಿಳಿಸಿದರು.

ಇದೇ ರೀತಿ ಕ್ರಮ ತೆಗೆದುಕೊಳ್ಳಲು ನಮ್ಮ ರಾಜ್ಯದ ನಿಲುವನ್ನು ಪ್ರಧಾನ ಮಂತ್ರಿಯವರಿಗೂ ಸಹ ಭಿನ್ನವಿಸಲಾಗಿದೆ.

ಶ್ರೀ ಎಂ. ವೀರಪ್ಪಮೊಯಿಲಿ.—ಮಾನ್ಯ ಅಧ್ಯಕ್ಷರೇ, ಕಾವೇರಿ ಜಲ ವಿವಾದದ ವಿಚಾರದಲ್ಲಿ ೧೭ನೇ ತಾರೀಖಿನ ಜೂನ್ ೮ರ ಹಿಂದೂಪತ್ರಿಕೆಯಲ್ಲಿ ಸವಿಸ್ತಾರವಾಗಿ ಬಂದಿದೆ. ಕೇಂದ್ರದ ಜಲ ಸಂಪನ್ಮೂಲ ಸಚಿವರು ಸಂಧಾನ ಮುರಿದು ಹೋಯಿತು ಇಂಟರ್‌ಸ್ಟೇಟ್ ರಿವರ್ ಡಿಸ್ಪ್ಯೂಟ್ ಆಕ್ಟ್ ಪ್ರಕಾರ ಪರಿಹಾರ ಮಾಡಬೇಕಾಗುತ್ತದೆಂದು ಹೇಳಿದ್ದಾರೆ. ಆ ಪತ್ರಿಕಾ ಗೋಷ್ಠಿಯಲ್ಲಿ ಸನ್ಮಾನ್ಯ ಮುಖ್ಯಮಂತ್ರಿಗಳು ಕೇಂದ್ರ ಸಚಿವರ ಹೇಳಿಕೆಯನ್ನು ಸಂಪೂರ್ಣವಾಗಿ ಅನುಮೋದಿಸುತ್ತೇನೆಂದು ಹೇಳಿದ್ದಾರೆ. ಇದರ ಬಗ್ಗೆ ತಾವು ಸ್ಪಷ್ಟೀಕರಣ ಕೊಡಬೇಕು. ಮಾನ್ಯ ಮುಖ್ಯಮಂತ್ರಿಗಳು ಸಂಧಾನ ದಲ್ಲಿ ಬಗೆಹರಿಸಬೇಕೆನ್ನುವ ವಾದ ಇಟ್ಟಿದ್ದೇವೆಂದು ಪತ್ರಿಕಾಗೋಷ್ಠಿಯಲ್ಲಿ ಹೇಳಬೇಕಾಗಿತ್ತು. ಅವರು ಏತಕ್ಕೆ ಹಾಗೆ ಹೇಳಲಿಲ್ಲ. ರಾಷ್ಟ್ರದ ದೊಡ್ಡ ದೊಡ್ಡ ಪತ್ರಿಕೆಗಳಲ್ಲಿ ಈ ವಿಷಯ ಪ್ರಕಟವಾಗಿದೆ. This is letting down the stand of Karnataka itself by no less a person than the Hon. Chief Minister.

೧೨-೩೦ ಪಿ.ಎಂ.

ಇದರ ಒಂದು ಸ್ಪಷ್ಟೀಕರಣ ಕೊಡಬೇಕು. ನನ್ನ ತಿಳಿವಳಿಕೆ ಪ್ರಕಾರ ಈ ವಿವಾದದ ಸಂಧಾನ ಮಾಡುವಾಗ ಅಡ್ವೋಕೇಟ್ ಜನರಲ್ ಕೂಡ ಅಲ್ಲಿ ಇದ್ದರು. ೧೯೭೪ರ ಅಗ್ರಿಮೆಂಟ್ ಇರುವುದರ ಬಗ್ಗೆ ಅಡ್ವೋಕೇಟ್ ಜನರಲ್ಲರು ಮುಖ್ಯಮಂತ್ರಿಗಳ ಗಮನ ಸೆಳೆದಿರಬೇಕು. ಇದನ್ನು ನೀವು